ಸಿಂಧನೂರು ತಾಲ್ಲೂಕಿನ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ

254 (377) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಸಿಂಧನೂರು ತಾಲ್ಲೂಕಿನಲ್ಲಿರುವ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಾರ್ವಜನಿಕ ಆಸ್ಪತ್ರೆಗಳಲ್ಲಿ ವೈದ್ಯರು ಹಾಗೂ ಇತರೆ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ಆಸ್ಪತ್ರೆಗಳವಾರು ಖಾಲಿ ಹುದ್ದೆಗಳ ವಿವರ ನೀಡುವುದು)

ಆ) ಹಾಗಿದ್ದಲ್ಲಿ, ಈ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

ಇ) ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು ?

ಶ್ರೀ ಅರವಿಂದ ಲಿಂಬಾವಳಿ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :–

ಅ) ಸಿಂಧನೂರು ಸಾರ್ವಜನಿಕ ಆಸ್ಪತ್ರೆಯಲ್ಲಿ, ಒಂದು ಮುಖ್ಯ ವೈದ್ಯಾಧಿಕಾರಿ, 2 ದಂತ ವೈದ್ಯರು ಮತ್ತು 9 ತಜ್ಞ ವೈದ್ಯರ ಹುದ್ದೆಗಳು ಮಂಜೂರಾಗಿವೆ. ಈ ಪೈಕಿ, 5 ತಜ್ಞ ವೈದ್ಯರು ಹಾಗೂ ಒಂದು ದಂತ ವೈದ್ಯಾಧಿಕಾರಿ ಹುದ್ದೆಗಳು ಭರ್ತಿಯಾಗಿವೆ.

ಮುಂದುವರೆದು, ಸದರಿ ಆಸ್ಪತ್ರೆಯಲ್ಲಿ ವಿವಿಧ ವೃಂದಗಳ ಒಟ್ಟು 70 ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ 34 ಹುದ್ದೆಗಳು ಭರ್ತಿಯಾಗಿವೆ ಹಾಗೂ 36 ಹುದ್ದೆಗಳು ಖಾಲಿ ಇವೆ.

ಸದರಿ ತಾಲ್ಲೂಕಿನಲ್ಲಿ 11 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಒಟ್ಟು 11 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ 7 ಹುದ್ದೆಗಳು ಭರ್ತಿಯಾಗಿವೆ ಹಾಗೂ 4 ಹುದ್ದೆಗಳು ಖಾಲಿಯಿವೆ. ಮುಂದುವರೆದು, ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವಿವಿಧ ವೃಂದಗಳ ಒಟ್ಟು 75 ಸಿಬ್ಬಂದಿ ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ 55 ಹುದ್ದೆಗಳು ಭರ್ತಿಯಾಗಿವೆ ಹಾಗೂ 20 ಹುದ್ದೆಗಳು ಖಾಲಿಯಿವೆ.

(ಆಸ್ಪತ್ರೆ/ಕೇಂದ್ರವಾರು ಖಾಲಿ ಹುದ್ದೆಗಳ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ)

ಇ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮದ ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಅನುಬಂಧ – I

ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಆರೋಗ್ಯ ಕೇಂದ್ರಗಳ ವಿವರ

ಕ್ರ.ಸಂ	ಹುದ್ದೆಗಳು	ಹುದ್ದೆಗಳ ಮಾಹಿತಿ																												
	ಆರೋಗ್ಯ ಕೇಂದ್ರಗಳ ಮಾಹಿತಿ	ಜಿ ಡಿ ಎಮ್ ಓ			ಪ್ರ.ದ.ಸ			ದ್ವಿ.ದ.ಸ			ಪಾಮಕಿಸ್ಟ್			ಕಿ.ಪ್ರಾ ಶಾಲಾ ಶಿಕ್ಷಕರು			ಹಿ.ಆ.ಸೆ(ಪು)			ಕಿ.ಆ.ಸ(ಪು)			ಕಿ.ಆ.ಸ(ಪು)			ಗ್ರಾಮ್ ಸಿ		
		ಮ	ಕಾ	ಖಾ	ಮ	ಕಾ	ಖಾಲಿ	ಮ	ಕಾ	ಖಾಲಿ	ಮ	ಕಾ	ಖಾಲಿ	ಮ	ಕಾ	ಖಾಲಿ	ಪು	ಕಾ	ಖಾಲಿ	ಪು	ಕಾ	ಖಾಲಿ	ಪು	ಕಾ	ಖಾಲಿ	ಮ	ಕಾ	ಖಾಲಿ
1	ಪ್ರಾ.ಆ ಕೇಂದ್ರ ತುರ್ವಿಹಾಳ	1	1	0	1	0	1	0	0	0	1	1	0	1	1	0	1	1	0	1	1	0	1	1	0	0	0	0
2	ಪ್ರಾ.ಆ ಕೇಂದ್ರ ಡಿಡೇಸೂಗೂರು	1	1	0	1	0	1	0	0	0	1	1	0	1	1	0	0	0	0	1	0	1	1	1	0	1	1	0
3	ಪ್ರಾ.ಆ ಕೇಂದ್ರ ಸಾಲಗುಂದಾ	1	0	1	1	0	1	0	0	0	1	1	0	1	1	0	0	0	0	1	0	1	1	1	0	1	0	1
4	ಪ್ರಾ.ಆ ಕೇಂದ್ರ ಹಾರಪೂರ	1	1	0	1	0	1	0	0	0	1	0	1	1	1	0	0	0	0	1	0	1	1	1	0	1	1	1
5	ಪ್ರಾ.ಆ ಕೇಂದ್ರ ಬಾದರ್ಲಿ	1	0	1	1	1	0	0	0	0	1	1	0	1	1	0	0	0	0	1	0	1	1	1	0	1	1	0
6	ಪ್ರಾ.ಆ ಕೇಂದ್ರ ಜಾಲಿಹಾಳ ಕ್ಯಾಂಪ್	1	1	0	1	0	1	0	0	0	1	1	0	0	0	0	1	0	1	1	1	0	1	1	0	1	0	1
7	ಪ್ರಾ ಆ ಕೇಂದ್ರ ಜವರಗೇರಾ	1	1	0	1	0	1	1	1	0	1	1	0	1	1	0	1	1	0	1	1	0	1	1	0	1	1	0
8	ಪ್ರಾ ಆ ಕೇಂದ್ರ ಇಳಗನೂರು	1	1	0	1	0	1	0	0	0	1	1	0	1	1	0	0	0	0	1	1	0	1	1	0	1	1	0
9	ಪ್ರಾ ಆ ಕೇಂದ್ರ ಜೂಪರಾವ್ ಕ್ಯಾಂಪ್	1	0	1	1	1	0	0	0	0	1	1	0	1	1	0	0	0	0	0	0	0	1	1	0	1	1	0

10	ಪ್ರಾ ಆ ಕೇಂದ್ರ ಅರ್ ಪಹ್ ಸಂ-2	1	1	0	1	0	1	0	0	0	1	1	1	0	0	0	0	0	0	0	0	0	0	1	1	0			0		
11	ಪ್ರಾ.ಆ ಕೇಂದ್ರ ರಾಗಲಪರ್ವಿ	1	0	1	1	0	1	0	0	0	1	1	0	0	0	0	0	0	0	0	0	0	0	1	1	0			0		
		11	7	4	11	2	9	1	1	0	11	9	2	8	8	0	0	2	1	8	4	4	11	11	0	14	14	0			

ಎಲ್ಲಾ ಹುದ್ದೆಗಳಯ ಸೇರಿ	75
ಮಂಜೂರು	75
ಕಾರ್ಯ	55
ಖಾಲಿ	20

ವೈದ್ಯಾಧಿಕಾರಿಗಳು	
ಮಂಜೂರು	11
ಕಾರ್ಯ	7
ಖಾಲಿ	4

N.N

ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣಾಧಿಕಾರಿಗಳ ಕಛೇರಿ ರಾಯಚೂರು

ಅನುಬಂಧ–2

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿಯಿರುವ ತಜ್ಞ ವೈದ್ಯರ, ವೈದ್ಯರ ಮತ್ತು ಇತರೆ ಸಿಬ್ಬಂದಿ ಹುದ್ದೆಗಳನ್ನು ತುಂಬಲು ತೆಗೆದುಕೊಂಡ ಕ್ರಮಗಳ ವಿವರಗಳು :

1. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್.ಆರ್.ಹೆಚ್.ಎಂ.)ದ ಅಡಿಯಲ್ಲಿ ಸ್ತ್ರೀರೋಗ ತಜ್ಞತೆ, ಅರವಳಿಕೆ ಹಾಗೂ ಮಕ್ಕಳ ತಜ್ಞತೆಯಲ್ಲಿ ಗೌರವಧನದ ಆಧಾರದ ಮೇಲೆ ತಜ್ಞ ವೈದ್ಯರನ್ನು ನೇಮಿಸಿಕೊಳ್ಳಲು ಸಿ–ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಅನ್ವಯಿಸುವಂತೆ ಮಾಸಿಕ ರೂ. 70,000 ಹಾಗೂ ಇತರೆ ಎಲ್ಲಾ ಜಿಲ್ಲೆಗಳಿಗೆ ರೂ. 50,000 ದಂತೆ ನೀಡಲು ಅವಕಾಶ ಕಲ್ಪಿಸಲಾಗಿದೆ.

2. ಕೆ.ಹೆಚ್.ಎಸ್.ಡಿ.ಆರ್.ಪಿ ಯೋಜನೆಯಡಿಯಲ್ಲಿ ಇತರೆ ತಜ್ಞತೆಗಳಿಗೆ (ಮಕ್ಕಳ ತಜ್ಞರು, ಸ್ತ್ರೀರೋಗ ತಜ್ಞರು ಹಾಗೂ ಅರವಳಿಕೆ ತಜ್ಞರನ್ನು ಹೊರತುಪಡಿಸಿ) ಸಂಬಂಧಪಟ್ಟಂತೆ, ಮೇಲೆ ತಿಳಿಸಿದ ಜಿಲ್ಲೆಗಳಲ್ಲಿ ಕ್ರಮವಾಗಿ ಮಾಸಿಕ ರೂ. 65,000 ಹಾಗೂ ರೂ. 50,000 ದಂತೆ ಗೌರವಧನ ನೀಡಲಾಗುತ್ತಿದೆ. ಮುಂದುವರೆದು, ರೀಟೈನರ್‌ಷಿಪ್ ಆಧಾರದಲ್ಲಿ ನೇಮಕ ಮಾಡುವ ಎಲ್ಲಾ ತಜ್ಞ ವೈದ್ಯರಿಗೆ ಸಂಬಂಧಿಸಿದಂತೆ ನೀಡಲಾಗುತ್ತಿದ್ದ ಗೌರವಧನವನ್ನು ಸಿ–ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಅನ್ವಯಿಸುವಂತೆ ಮಾಸಿಕ ರೂ. 5,000 ದಿಂದ ರೂ. 10,000 ಕ್ಕೆ ಹೆಚ್ಚಿಸಿ ಹಾಗೂ ಇತರೆ ಎಲ್ಲಾ ಜಿಲ್ಲೆಗಳಿಗೆ ರೂ. 8,000 ದಂತೆ ನೀಡಿ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಮುಂದುವರೆದು, ಸದರಿ ತಜ್ಞರು ಹೊರ ರೋಗಿ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದಲ್ಲಿ ದಿನವೊಂದಕ್ಕೆ ರೂ. 1,000 ದಂತೆ ಗೌರವ ಧನ ನೀಡಲು ಅವಕಾಶ ಕಲ್ಪಿಸಲಾಗಿದೆ.

3. ಮೇಲೆ ತಿಳಿಸಿದಂತೆ ಎನ್.ಆರ್.ಹೆಚ್.ಎಂ./ಕೆ.ಹೆಚ್.ಎಸ್.ಡಿ.ಆರ್.ಪಿ. ಅಡಿಯಲ್ಲಿ ಅವಕಾಶಗಳನ್ನು ಕಲ್ಪಿಸಿದ್ದಾಗ್ಯೂ, ಎನ್.ಆರ್.ಹೆಚ್.ಎಂ. ಅಡಿಯಲ್ಲಿ ಕೇವಲ 125 ಹಾಗು ಕೆ.ಹೆಚ್.ಎಸ್.ಡಿ.ಆರ್.ಪಿ. ಅಡಿಯಲ್ಲಿ ಕೇವಲ 49 ವಿವಿಧ ತಜ್ಞತೆ ಹೊಂದಿರುವ ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಒಟ್ಟಾರೆ, ಸರ್ಕಾರಿ ಆಸ್ಪತ್ರೆ/ಕೇಂದ್ರಗಳಲ್ಲಿ ತಜ್ಞ ವೈದ್ಯರು ಕರ್ತವ್ಯ ನಿರ್ವಹಿಸಲು ಮುಂದೆ ಬರುತ್ತಿರುವವರ ಸಂಖ್ಯೆ ಉತ್ತೇಜನಕಾರಿಯಾಗಿಲ್ಲ.

4. ಎಂ.ಬಿ.ಬಿ.ಎಸ್. ವೈದ್ಯರಿಗೆ ಅರವಳಿಕೆ ಹಾಗೂ ಸಿಜೇರಿಯನ್ ಶಸ್ತ್ರಚಿಕಿತ್ಸೆಗಳಿಗೆ ತರಬೇತಿ ನೀಡಲಾಗುತ್ತಿದ್ದು, ಈ ಮೂಲಕ ಸ್ತ್ರೀರೋಗ ಹಾಗೂ ಅರವಳಿಕೆ ತಜ್ಞರ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗಿದೆ.

5. ಕರ್ನಾಟಕ ಲೋಕಸೇವಾ ಆಯೋಗದ ಮೂಲಕ 600 ತಜ್ಞ ವೈದ್ಯರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಇತ್ತೀಚೆಗೆ ಕ್ರಮ ಕೈಗೊಳ್ಳಲಾಗಿ ಒಟ್ಟು 252 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಆಯ್ಕೆಯಾದ ಎಲ್ಲಾ 252 ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿ ಮಾಡಲು ಕ್ರಮ ಕೈಗೊಳ್ಳಲಾಗಿ, ಕೇವಲ 137 ಅಭ್ಯರ್ಥಿಗಳು ಸ್ಥಳ ಆಯ್ಕೆ ಮಾಡಿಕೊಂಡರು. ಆ ಪೈಕಿ ಕೇವಲ 75 ಅಭ್ಯರ್ಥಿಗಳು ಮಾತ್ರ ಕಾರ್ಯವರದಿ ಮಾಡಿಕೊಂಡಿದ್ದಾರೆ.

6. ಎಂ.ಬಿ.ಬಿ.ಎಸ್. ವಿದ್ಯಾರ್ಹತೆಯ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಒಟ್ಟು 2586 ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ 2390 ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. (ಇತ್ತೀಚೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ವೈದ್ಯರು ಸೇರಿದಂತೆ) ಹಾಗೂ 196 ಹುದ್ದೆಗಳು ಖಾಲಿಯಿವೆ. ದಿನಾಂಕ : 27-06-2012 ರಂದು ಒಟ್ಟು 155 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಲು ಜಿಲ್ಲಾಧಿಕಾರಿಗಳಿಗೆ ಸರ್ಕಾರವು ಅನುಮತಿ ನೀಡಿದೆ.

7. ಪ್ರಸ್ತುತ 735 ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಹಾಗು 314 ಕಿರಿಯ ಆರೋಗ್ಯ ಪುರುಷ ಸಹಾಯಕರ ಹುದ್ದೆಗಳನ್ನು ವಿಶೇಷ ನೇಮಕಾತಿ ಸಮಿತಿ ಮೂಲಕ ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಿದ್ದು, ಆಯ್ಕೆ ಪ್ರಕ್ರಿಯೆಯು ಜಾರಿಯಲ್ಲಿದೆ.

8. ಕರ್ನಾಟಕ ಲೋಕಸೇವಾ ಆಯೋಗದಿಂದ ಪ್ರಸ್ತುತ 224 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿ, ಆಯ್ಕೆಯಾದ 224 ಅಭ್ಯರ್ಥಿಗಳ ಪೈಕಿ 210 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ.

9. ಇಲಾಖೆಯಲ್ಲಿ ಒಟ್ಟು 13965 ಗ್ರೂಪ್-ಡಿ ನೌಕರರ ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ 4067 ಹುದ್ದೆಗಳು ಖಾಲಿಯಿವೆ. ಸದರಿ ಖಾಲಿ ಹುದ್ದೆಗಳ ಪೈಕಿ 2323 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರವು ಇತ್ತೀಚೆಗೆ ಮಂಜೂರಾತಿ ನೀಡಿದೆ.